# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 85 / 2015

ಪಿರ್ಯಾದುದಾರರು ಃ ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ ಃ ಸಿದ್ದಗೊಂಡಬೀರದಾರ**

**ಚಾಸಾ ಃ- 12 / ಪ್ರಾಸಾ ಃ- 04**

| | |
|---|---|
| ಹೆಸರು | **ಜಯಂತಿ** |
| ತಂದೆಯ / ಗಂಡನ ಹೆಸರು | **ಸುರೇಶ** |
| ವಯಸ್ಸು | **12** |
| ಉದ್ಯೋಗ | **ವಿದ್ಯಾರ್ಥಿ** |
| ವಿಳಾಸ | **ಯಶವಂತಪುರ, ಬೆಂಗಳೂರು** |

**ದಿನಾಂಕಃ 12-04-2019 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಚಾಸಾ-4 ನನ್ನ ದೊಡ್ಡಮ್ಮ, ಚಾಸಾ-5 ನನ್ನ ಚಿಕ್ಕಮ್ಮ. ದಿನಾಂಕಃ 20-04-2014 ರಂದು ನಾವುಗಳು ಯಡಿಯೂರಿನಲ್ಲಿರುವ ನಮ್ಮ ಚಿಕ್ಕಮ್ಮನ ಮನೆಗೆ ಹೋಗಿ ಒಂದು ದಿನ ತಂಗಿದ್ದು, ಮರು ದಿನ ಬೆಳಿಗ್ಗೆ ಯಡಿಯೂರಿನಿಂದ ಮಧ್ಯಾಹ್ನ 1 ಗಂಟೆಯ ಸಮಯದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆಃ ಕೆಎ-13-ಎಫ್-1882 ನ್ನು ಹತ್ತಿದ್ದು, ಮಧ್ಯಾಹ್ನ 2.30 ಗಂಟೆಯ ಸಮಯದಲ್ಲಿ ಸೋಲೂರು ಹಾಲಿನ ಡೈರಿ ಸರ್ಕಲ್ ಬಳಿ ಸದರಿ ಬಸ್ಸಿನ ಚಾಲಕ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಪಲ್ಟಿಯಾಗಿದ್ದು, ಅಪಘಾತದ ಬಾಬ್ತು ಚಾಸಾ-4 ರವರ ಕಾಲು, ಸೊಂಟ ಮತ್ತು ಮೈಕೈಗೆ ಸಾಮಾನ್ಯ ಸ್ವರೂಪದ ರಕ್ತಗಾಯವಾಗಿದ್ದು, ಚಾಸಾ-5 ಬಲಗೈ, ಹೊಟ್ಟೆ, ಸೊಂಟಕ್ಕೆ

ಹಾಗೂ ಮೈಕೈಗೆ ಸಾಮಾನ್ಯ ಸ್ವರೂಪದ ರಕ್ತಗಾಯವಾಗಿದ್ದು, ನನಗೆ ಕಿವಿ ಪೆಟ್ಟಾಗಿ ಬಲ ಕಿವಿ ಹರಿದು ಹೋಗಿದ್ದು, ಕೈಗೆ ಸೊಂಟಕ್ಕೆ ಹಾಗೂ ಹೊಟ್ಟೆಗೆ ಪೆಟ್ಟಾಗಿರುತ್ತದೆ ಹಾಗೂ ಬಸ್ಸಿನಲ್ಲಿದ್ದ ಹಲವರಿಗೂ ಸಹ ಸಣ್ಣಪುಟ್ಟ ಗಾಯಗಳಾಗಿರುತ್ತದೆ. ನಂತರ ನಮ್ಮಗಳನ್ನು ಸಾರ್ವಜನಿಕರು ಸೋಲೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಬಿ.ಜಿ.ಎಸ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ. ಅಪಘಾತದ ಪಡಿಸಿದ ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಗುರುತಿಸಲು ಹಾಗೂ ಚಾಲಕನನ್ನು ನೋಡಿ ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ, ಆದ ಕಾರಣ ಕೆ.ಎಸ್.ಆರ್.ಟಿ.ಸಿ. ಬಸ್ ಹಾಗೂ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿಯುತ್ತಾರೆ. ಅಪಘಾತಕ್ಕೆ ಆರೋಪಿ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆ ಕಾರಣವಾಗಿರುತ್ತದೆಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು** ಃ- **ಶ್ರೀ. ಜಿ.ಎನ್.ಎಸ್.** ವಕೀಲರಿಂದ **ಆರೋಪಿ** ಪರವಾಗಿ ಃ-

ಯಡಿಯೂರಿನಿಂದ ಸೋಲೂರು ಸುಮಾರು 30 ಕಿ.ಮೀ. ಅಂತರವಿರುತ್ತದೆಂದರೆ ಸರಿ. ಅಪಘಾತ ಎಷ್ಟು ಗಂಟೆಗೆ ಆಗಿರುತ್ತದೆಂದರೆ ಸಾಕ್ಷಿ ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಆಗಿರುತ್ತದೆಂದು ನುಡಿಯುತ್ತಾರೆ. ಯಡಿಯೂರಿನಿಂದ ಸೋಲೂರಿನವರೆಗೆ ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕ ಬಸ್ಸನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ. ಸೋಲೂರು ಬಸ್ ನಿಲ್ದಾಣದಿಂದ ಸೋಲೂರು ಹಾಲಿನ ಡೈರಿ ಎಷ್ಟು ಅಂತರವಿರುತ್ತದೆಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಸೋಲೂರು ಬಸ್ ನಿಲ್ದಾಣದಿಂದ ಸೋಲೂರು ಹಾಲಿನ ಡೈರಿ ಸುಮಾರು 1 ಫರ್ಲಾಂಗ್ ಅಂತರವಿರುತ್ತದೆಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸೋಲೂರು ಬಸ್ ನಿಲ್ದಾಣದಿಂದ ಸೋಲೂರು ಹಾಲಿನ ಡೈರಿಯವರಿಗೆ ಬಹಳಷ್ಟು ಜನ ಇರುತ್ತಾರೆಂದರೆ

**ಸಿ.ಸಿ. ಸಂಖ್ಯೆ: 85 / 2015**
**ಚಾಸಾ-12 / ಪ್ರಾಸಾ-04**

ಸರಿ. ಬಹಳಷ್ಟು ಜನ ಇರುವ ಕಾರಣ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿ. ಸದರಿ ಬಸ್ಸಿನಲ್ಲಿ 15-20 ಜನ ಪ್ರಯಾಣಿಸುತ್ತಿದ್ದರು.

2. ಅಪಘಾತವನ್ನು ನೀವು ಕಣ್ಣಾರೆ ಕಂಡಿರುವುದಿಲ್ಲ ಎಂದರೆ ಸರಿಯಲ್ಲ. ಕೆ.ಎಸ್.ಆರ್.ಟಿ.ಸಿ. ಬಸ್ ನ ಎಡಭಾಗದ ಚಕ್ರ ಸ್ಫೋಟಗೊಂಡು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪುಟ್ ಪಾತ್ ತಲುಪಿರುತ್ತದೆಂದರೆ ಸರಿಯಲ್ಲ. ಅಪಘಾತ ಪರಿಹಾರ ಪಡೆಯಲು ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿ. ಅಪಘಾತದ ಬಾಬ್ತು ನಾನು ಸೋಲೂರು ಹಾಲಿನ ಡೈರಿಯ ಬಳಿ ಪೋಲಿಸರಿಗೆ ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಹೇಳಿಕೆ ನೀಡಿರುತ್ತೇನೆ. ಕೆ.ಎಸ್.ಆರ್.ಟಿ.ಸಿ. ಬಸ್ ನ ಎಡಭಾಗದ ಚಕ್ರ ಸ್ಫೋಟಗೊಂಡು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪುಟ್ ಪಾತ್ ಇಳಿದಿದ್ದು, ನೀವು ಅಪಘಾತ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**